ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-1 Issue 3, Nov-Dec 2019, 31-39**
**©*IIMRD*, Mysuru**

IIMRD JOURNALS
**www.iimrd.com**

# ಭಾರತೀಯ ಸಂಸ್ಕೃತಿ ಮತ್ತು ಸ್ವಾಮಿ ವಿವೇಕಾನಂದ

**ಚಿನ್ನಮ್ಮ ಕೆ.ಬಿ***

**ಪೀಠಿಕೆ**

***'ಸಂಸ್ಕೃತಿ ಮಾತ್ರವೇ ಆಘಾತಗಳನ್ನು ಸಹಿಸಿಕೊಳ್ಳಬಲ್ಲದೇ ಹೊರತು ಜ್ಞಾನದ ರಾಶಿಯಲ್ಲ. ನೀವು ಜ್ಞಾನದ ರಾಶಿಯಿಂದ ಪ್ರಪಂಚವನ್ನೇ ತುಂಬಿಬಿಟ್ಟರೂ ಅದರಿಂದೇನೂ ಹೆಚ್ಚು ಒಳಿತಾದಂತಾಗುವುದಿಲ್ಲ. ಸಂಸ್ಕೃತಿಯು ರಕ್ತದಲ್ಲಿ ಬೆರೆಯಬೇಕು, ಜ್ಞಾನ ಚರ್ಮದ ಹೊದಿಕೆಯಂತೆ, ನಾಗರಿಕತೆಯಂತೆ, ಸ್ವಲ್ಪ ಬಗೆದರೂ ಒಳಗಿನ ಪಾಶವೀ ಶಕ್ತಿ ಹೊರಬರುವುದು......ಅದ್ದರಿಂದ ಜನರಿಗೆ ಸಂಸ್ಕೃತಿಯನ್ನು ನೀಡಿ'– ಸ್ವಾಮಿ ವಿವೇಕಾನಂದ***

ಸಂಸ್ಕೃತಿಯು ಯಾವುದೇ ಒಂದು ರಾಷ್ಟ್ರದ ಬಹುದೊಡ್ಡ ಸಂಪತ್ತಾಗಿದ್ದು, ಮನುಷ್ಯನ ಮನಸ್ಸಿಗೆ ಒಂದು ಸಂಸ್ಕಾರವನ್ನು ನೀಡಿ ಅದನ್ನು ಪರಿಶುದ್ಧಗೊಳಿಸುತ್ತದೆ. ಸಂಸ್ಕೃತಿ ಎಂದರೆ ನಡೆ–ನುಡಿ, ಆಚಾರ–ವಿಚಾರ, ಉಡುಗೆ–ತೊಡುಗೆ ಇವುಗಳ ಒಟ್ಟಾರೆ ಮೊತ್ತವಾಗಿದೆ. ತಮ್ಮ ಪೂರ್ವಜರಿಂದ ಕಲಿತುಕೊಂಡ ಭಾಷೆ ,ಊಟ, ಉಡುಗೆ, ತೊಡುಗೆ, ಸಂಪ್ರದಾಯ, ಮದುವೆಯ ಪದ್ಧತಿ, ರೂಢಿ, ಆಚಾರ–ವಿಚಾರ, ಸಾಧನ–ಸಾಮಗ್ರಿ, ಮನೆ, ಮಠ, ಸಂಘ–ಸಂಸ್ಥೆ, ಕೆಲಸ ಮಾಡುವ ಪದ್ಧತಿ, ಧ್ಯೇಯ ಧೋರಣೆ ಮುಂತಾದ ಎಲ್ಲ ರೀತಿಯ ನಂಬುಗೆಗಳು ಮತ್ತು ನಡೆ ನುಡಿಗಳು ಸಂಸ್ಕೃತಿ ಎನಿಸಿಕೊಳ್ಳುತ್ತವೆ. ಪ್ರತಿಯೊಂದು ಜನಾಂಗ, ದೇಶ, ಸಮಾಜ, ವರ್ಗ ತನ್ನದೇ ಆದ ಒಂದು ಸಂಸ್ಕೃತಿಯನ್ನು ಕಟ್ಟಿಕೊಳ್ಳುತ್ತದೆ. ಅದೇ ರೀತಿ ಭಾರತೀಯ ಸಂಸ್ಕೃತಿಯೂ ಸಹ ಅನಾದಿ ಕಾಲದಿಂದಲೂ ತನ್ನದೇ ಆದ ವಿಶಿಷ್ಟತೆ, ಭವ್ಯಪರಂಪರೆಯನ್ನು ಮತ್ತು ಸಂಸ್ಕೃತಿಯನ್ನು ಹೊಂದಿದೆ. ಅದು ಕೇವಲ ರಾಜಕೀಯ ಸಂಗತಿಗಳಷ್ಟೇ ಮೀಸಲಾಗಿರದೆ, ಸಾಮಾಜಿಕ, ಆಧ್ಯಾತ್ಮಿಕವಾಗಿಯೂ ಇದೆ.

ನಮ್ಮ ಭಾರತೀಯ ಸಂಸ್ಕೃತಿಯು ಅತ್ಯಂತ ಪ್ರಾಚೀನ ಸಂಸ್ಕೃತಿಗಳಲ್ಲಿ ಒಂದಾಗಿದೆ. ಈಜಿಪ್ಟ್, ಚೀನಾ, ಮೆಸಪೊಟೇಮಿಯಾ ಮುಂತಾದ ಸಂಸ್ಕೃತಿಗಳು ಬೆಳೆದು ಅಳಿಸಿ ಹೋಗಿವೆ. ಆದರೆ ದೀರ್ಘಕಾಲ ಪರಕೀಯರ ಆಳ್ವಿಕೆಗೆ ಒಳಪಟ್ಟಿದ್ದರೂ, ರಾಜ್ಯ, ಸಾಮ್ರಾಜ್ಯಗಳು ಉರುಳಿದರೂ, ಅರಸರ ಮೇಲೆ ಅರಸರು ಆಳಿ ಹಳಿದರೂ ಭಾರತೀಯ ಸಂಸ್ಕೃತಿಯು ಮಾತ್ರ ನಿರಂತರವಾಗಿ ಇಂದಿನವರೆಗೂ ಸಾಗುತ್ತಲೇ ಬಂದಿರುವುದನ್ನು ಗಮನಿಸಬಹುದು. ಪ್ರಾಚೀನ ಋಷಿಮುನಿಗಳು ಬರೆದಿರುವಂತಹ ಆಧ್ಯಾತ್ಮಿಕ

* *ಸಂಶೋಧನಾ ವಿದ್ಯಾರ್ಥಿನಿ, ತತ್ವಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.*

ಗ್ರಂಥಗಳಿಂದ ಪ್ರಭಾವಿತರಾದ ಭಾರತೀಯರು 'ನಿಜವಾದ ಸುಖವಿರುವುದು ಕೇವಲ ಲೌಕಿಕ ವಸ್ತುಗಳಿಂದಲ್ಲ, ಅದು ಆಧ್ಯಾತ್ಮಿಕ ಸಾಧನೆಯಿಂದ ಮಾತ್ರ ಸಾಧ್ಯ' ಎಂಬುದನ್ನು ಮನಗಂಡಿದ್ದಾರೆ.

ಭಾರತೀಯ ಸಮಾಜವು ವಿವಿಧ ಧರ್ಮ, ಮತ, ಭಾಷೆ, ಸಂಸ್ಕೃತಿ, ಜೀವನ ಕ್ರಮವನ್ನೊಳಗೊಂಡ ವೈವಿಧ್ಯಮಯ ನಾಡಾಗಿದೆ. ಭಾರತವು ಪರಧರ್ಮ ಸಹಿಷ್ಣುತೆ ಮತ್ತು ವಿಶ್ವಭ್ರಾತೃತ್ವಗಳನ್ನುಳ್ಳ ಮತ್ತು ಅದನ್ನು ಆಚರಿಸುತ್ತಿರುವ ರಾಷ್ಟ್ರವಾಗಿದೆ. ವೈವಿಧ್ಯತೆಗೆ ಹೆಸರಾಗಿರುವ ಭಾರತವು ಐಕ್ಯತೆಯಿಂದ ಕೂಡಿದೆ. ಭಾರತೀಯರು ಧರ್ಮ, ಶಾಂತಿ, ಅಹಿಂಸೆಯ ತತ್ವಧಾರಿಗಳಾಗಿದ್ದು, ಸರ್ವಧರ್ಮ ಸಹಿಷ್ಣುತೆ ಇವರ ವಿಶಿಷ್ಟ ಗುಣವಾಗಿದೆ. ಭಾರತೀಯ ಸಂಸ್ಕೃತಿ 'ಬಾಳು ಮತ್ತು ಇತರರನ್ನು ಬಾಳಲು ಬಿಡು' ಎಂಬ ತತ್ವವನ್ನು ಹೊಂದಿರುವುದನ್ನು ಕಾಣಬಹುದಾಗಿದೆ.

'ಒಂದು ದೇಶದ ಸಂಪತ್ತು ಯಾವುದರಲ್ಲಿದೆ? ಎಂಬ ಪ್ರಶ್ನೆಗೆ ಅದು ಸಂಚಯಿಸಿಕೊಂಡಿರುವ ಚಿನ್ನ–ಬೆಳ್ಳಿಗಳಷ್ಟರಲ್ಲೇ ಇರದೆ, ಅದು ಹೊಂದಿರುವ ವಜ್ರ ಸದೃಶ ವ್ಯಕ್ತಿಗಳಲ್ಲಿದೆ' ಎಂಬ ಜಾನ್ ರಸ್ಕಿನ್ ರವರ ಉಕ್ತಿಯು ನಮ್ಮ ಮಾತೃಭೂಮಿಯಾದ ಭಾರತಕ್ಕೂ ಅನ್ವಯವಾಗುತ್ತದೆ. ಭಾರತದೇಶ ಕಂಡ ಅಂತಹ ಅನೇಕ ವಜ್ರಸದೃಶ ವ್ಯಕ್ತಿಗಳ ಸಾಲಿನಲ್ಲಿ ಸ್ವಾಮಿ ವಿವೇಕಾನಂದರು ಒಬ್ಬರಾಗಿದ್ದಾರೆ. ಅವರು ತಮ್ಮ ಅಪ್ರತಿಮ ಶಕ್ತಿ ಸಾಮರ್ಥ್ಯದಿಂದ, ಅಗಾಧವಾದ ಆಂತರಿಕ ಚೈತನ್ಯ ಸ್ಫೂರ್ತಿಯಿಂದ, ಅದ್ಭುತ ಪ್ರತಿಭಾ ಸಂಪನ್ನತೆಯಿಂದ, ಪ್ರಭಾವ ಪೂರ್ಣ ವಾಕ್‌ಪಟುತ್ವದಿಂದ, ಪ್ರಚೋದಕ ಭಾಷಣಗಳಿಂದ ರಾಷ್ಟ್ರಚೇತನವನ್ನು ಜಾಗ್ರತಗೊಳಿಸಿ ಭಾರತೀಯ ಧರ್ಮ, ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಿದರು. ಹಾಗೆಯೇ ಹಿಂದೂ ಧರ್ಮದ ಬಗ್ಗೆ ಅಪಾರವಾದ ಗೌರವ ಹೆಮ್ಮೆಯನ್ನು ಹೊಂದಿದ್ದ ಅವರು ಪಾಶ್ಚಾತ್ಯರಿಗಿದ್ದ ಹಿಂದೂ ಧರ್ಮ ಮತ್ತು ಭಾರತೀಯ ಸಂಸ್ಕೃತಿಯ ಬಗ್ಗೆ ಇದ್ದ ತಪ್ಪು ಕಲ್ಪನೆಯನ್ನು ಹೋಗಲಾಡಿಸಿ ತಮ್ಮ ಸಿಂಹ ಘರ್ಜನೆಯಿಂದ ಪಾಶ್ಚಾತ್ಯರ ಕಣ್ಣು ತೆರೆಸಿದರು. ಭಾರತೀಯ ಧರ್ಮ, ಸಂಸ್ಕೃತಿ, ಕಲೆ ಯಾವ ಸಂಸ್ಕೃತಿಗೂ ಕಡಿಮೆಯಿಲ್ಲ ಎಂಬುದನ್ನು ಸ್ಪಷ್ಟಪಡಿಸಿದರು. ಭಾರತೀಯ ಸಂಸ್ಕೃತಿಯ ಮತ್ತು ಆಧ್ಯಾತ್ಮಿಕತೆಯ ರಾಯಬಾರಿಯೂ, ಅದರ ಪುನರುದ್ಧಾರಕರೂ ಆಗಿದ್ದರು. ಜಾತಿ–ಮತ–ಪಂಥಗಳ ಭೇದವೆಣಿಸದೆ ಎಲ್ಲರನ್ನು ತನ್ನವರೆಂದು ಭಾವಿಸಿ, ಕೂಡಿ ಬಾಳುವುದನ್ನು ಉಸಿರಾಗಿಸಿಕೊಂಡಿರುವ ಯಹೂದ್ಯರು, ಪಾರ್ಸಿಗಳು, ಕ್ರಿಶ್ಚಿಯನ್ನರು, ಮುಸಲ್ಮಾನರು ಮುಂತಾದ ಎಲ್ಲ ಧರ್ಮಿಯರಿಗೂ ಸಮಾನ ಸ್ಥಾನಮಾನ ನೀಡಿದರು. ಇಂತಹ ವೈಶಿಷ್ಟ್ಯ ಪೂರ್ಣ ಸನಾತನ ಸಂಸ್ಕೃತಿಯ ಮತ್ತು ಆಧ್ಯಾತ್ಮಿಕ ಪರಂಪರೆಯ ಪ್ರತಿನಿಧಿಯಾಗಿದ್ದವರು ಸ್ವಾಮಿ ವಿವೇಕಾನಂದರು.

'ಭವಿಷ್ಯ ಭಾರತ' ಎಂಬ ತಮ್ಮದೊಂದು ಉಪನ್ಯಾಸದಲ್ಲಿ ಸ್ವಾಮಿ ವಿವೇಕಾನಂದರು ಹೀಗೆ ಹೇಳಿದ್ದಾರೆ: "ಇತರ ರಾಷ್ಟ್ರಗಳಿಗೆ ಹೋಗುವ ಮುಂಚೆ ಜ್ಞಾನ ಎಲ್ಲಿ ತನ್ನ ಮನೆಯನ್ನು ನಿರ್ಮಿಸಿತೋ ಆ ಪ್ರಾಚೀನ ನಾಡು ಇದು. ಲೌಕಿಕ ಕ್ಷೇತ್ರದಲ್ಲಿ ಆಧ್ಯಾತ್ಮವು ಸಾಗರದಂತೆ ಉರುಳುವ ನದಿಗಳಾಗಿ ವ್ಯಕ್ತಗೊಂಡದ್ದು ಇಲ್ಲೆ, ಈ ಭರತ ಖಂಡದಲ್ಲೆ. ಹಿಮ ಮುಚ್ಚಿದ ಶಿಖರ–ಶಿಖರಗಳಾಗಿ ಎದ್ದು ಸ್ವರ್ಗದ ರಹಸ್ಯಗಳನ್ನು ಭೇದಿಸುವಂತೆ ದೃಷ್ಟಿನೆಟ್ಟು ನಿಂತಿರುವ ಸನಾತನ ಹಿಮಾಲಯ ಪರ್ವತವು ಇರುವುದು ನಮ್ಮ ಭಾರತದೇಶದಲ್ಲಿಯೆ, ಮಹಾಸಂತರು ತುಳಿದದ್ದು ಸಹ ಈ ಭರತಖಂಡದ ನೆಲವನ್ನೆ. ಮೊಟ್ಟ

ಮೊದಲ ಬಾರಿಗೆ ಮಾನವನ ಸ್ವಭಾವವನ್ನೂ ಅವನ ಅಂತರಂಗ ಜಗತ್ತನ್ನೂ ಕುರಿತು ಅನ್ವೇಷಣೆ ನಡೆಸಿದ್ದು ಈ ನಾಡಿನಲ್ಲಿಯೆ. ಮೊಟ್ಟ ಮೊದಲ ಬಾರಿಗೆ ದೇವರ ಅಸ್ತಿತ್ವ, ಪ್ರಕೃತಿಯಲ್ಲೂ, ಮಾನವನಲ್ಲೂ ದೇವರ ವ್ಯಾಪಕತೆ, ಆತ್ಮದ ಅಮರತ್ವ ಇವುಗಳೆಲ್ಲವನ್ನೂ ಕುರಿತ ಸಿದ್ಧಾಂತಗಳು ಮಂಡಿತವಾದದ್ದು, ಧರ್ಮ ಮತ್ತು ತತ್ವಗಳು ತಮ್ಮ ಅತ್ಯುನ್ನತ ಶಿಖರಗಳನ್ನು ಏರಿದ್ದು ಹಾಗೂ ಸಾಗರದ ಅಲೆಗಳಂತೆ ಆಧ್ಯಾತ್ಮ ಮತ್ತು ತತ್ವಶಾಸ್ತ್ರಗಳು ರಭಸವಾಗಿ ಹರಿದು ವಿಶ್ವವನ್ನೇ ವ್ಯಾಪಿಸಿದುದ್ದು ಈ ಭಾರತ ದೇಶದಲ್ಲೆ. ಜಗತ್ತಿನಲ್ಲಿ ಯಾವುದಾದರೂ ಒಂದು ದೇಶವು ಪುಣ್ಯಭೂಮಿಯೆಂದು ಕರೆಯಿಸಿಕೊಳ್ಳಲು ಅರ್ಹವಾಗಿದ್ದರೆ, ಜೀವಿಗಳು ತಮ್ಮ ಬಾಳಿನ ಕೊನೆಯ ಕರ್ಮವನ್ನು ಸವೆಸಲು ಬರಬೇಕಾದ ಸ್ಥಳವೊಂದಿದ್ದರೆ, ಭಗವಂತನೆಡೆಗೆ ಸಂಚರಿಸುತ್ತಿರುವ ಪ್ರತಿಯೊಂದು ಜೀವಿಯು ತನ್ನ ಕೊನೆಯ ಯಾತ್ರೆಯನ್ನು ಪೂರೈಸುವುದಕ್ಕೆ ಒಂದು ಕರ್ಮಭೂಮಿಗೆ ಬರಬೇಕಾಗಿದ್ದರೆ, ಯಾವುದಾದರೂ ದೇಶದಲ್ಲಿ ಮಾನವ ಕೋಟಿಯು ಮಾಧುರ್ಯ, ಔದಾರ್ಯ, ಪಾವಿತ್ರ್ಯ, ಶಾಂತಿ ಇವುಗಳಲ್ಲಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಧ್ಯಾನದಲ್ಲಿ ಹಾಗೂ ಅಂತರ್ಮುಖ ಜೀವನದಲ್ಲಿ ತನ್ನ ಪರಾಕಾಷ್ಠೆಯನ್ನು ಮುಟ್ಟಿದ್ದರೆ, ಅದು ಈ ಭರತ ಖಂಡವೇ ಆಗಿದೆ ....... ಇಲ್ಲಿದೆ ಬಾಳಿಗೆ ಹೊಸ ಬೆಳಕನ್ನು ನೀಡುವ ಅದ್ಭುತ ಪ್ರವಾಹ; ಅನ್ಯ ದೇಶಗಳಲ್ಲಿ ಕೋಟ್ಯಾಂತರ ಜೀವಿಗಳ ಎದೆಯನ್ನು ದಹಿಸುತ್ತಿರುವ ಜಡವಾದ ದಳ್ಳುರಿಯ ಶಮನಕ್ಕೆ ಅದ್ಭುತ ಪ್ರವಾಹ ಇಲ್ಲಿದೆ."[1]

ಮುಂದುವರಿದು ಹೇಳುತ್ತಾರೆ: "ಇಂತಹ ಅಲೆಗಳು ಮತ್ತೊಮ್ಮೆ ಇದೇ ದೇಶದಲ್ಲಿ ಹೆಚ್ಚು ಹೆಚ್ಚಾಗಿ ಉಕ್ಕಿ ಹರಿದು, ಅವನತಿ ಹೊಂದುತ್ತಿರುವ ಮಾನವ ಜನಾಂಗಗಳಿಗೆ ಪ್ರಾಣಶಕ್ತಿಯನ್ನು ತುಂಬಬೇಕಾಗಿದೆ. ಶತಶತಮಾನಗಳ ಆಘಾತಗಳನ್ನು ನೂರಾರು ವಿದೇಶಿಯರ ಆಕ್ರಮಣಗಳನ್ನು, ನೂರಾರು ನಡೆನುಡಿ ಆಚಾರಗಳ ಬದಲಾವಣೆಗಳನ್ನೂ ತಡೆದು ಸ್ಥಿರವಾಗಿ ನಿಂತಿರುವ ದೇಶ ಇದೇ. ಪ್ರಪಂಚದ ಯಾವುದೇ ಬಂಡೆಗಿಂತಲೂ ಹೆಚ್ಚು ಸ್ಥಿರವಾಗಿ ನಾವು ಕಾಣದಿರುವ ಶಕ್ತಿ, ನಾಶಗೊಳಿಸಲಾಗದ ಜೀವ ಇವುಗಳಿಂದ ಕೂಡಿ ನಿಂತಿರುವ ಭೂಮಿ ಇದಾಗಿದ್ದು, ಅಂತಹ ಭಾರತ ದೇಶದ ಮಕ್ಕಳು ನಾವು. ಕೇವಲ ಗತ ವೈಭವವನ್ನು ಹೊಗಳುವುದಕ್ಕೆ ನಾನು ಈ ಮಾತುಗಳನ್ನು ಹೇಳುತ್ತಿಲ್ಲ. ಈ ದೇಶದ ಹಿಂದಿನ ಸಾರವನ್ನೆಲ್ಲಾ ಸೆಳೆದು ಮಹತ್ತರವಾದ ಭಾರತವನ್ನು ರೂಪಿಸಬೇಕು"[2] ಎಂಬುದು ನನ್ನ ಉದ್ದೇಶವಾಗಿದೆ ಎಂಬುದಾಗಿ ಸ್ವಾಮಿ ವಿವೇಕಾನಂದರು ಹೇಳಿರುವುದನ್ನು ನಾವು ಇಲ್ಲಿ ಕಾಣಬಹುದಾಗಿದೆ.

ವಿವೇಕಾನಂದರ ದೇಶ ಮತ್ತು ಸಂಸ್ಕೃತಿ ಪ್ರೇಮವನ್ನು ಕುರಿತು ಸೋದರಿ ನಿವೇದಿತಾರವರು ಸ್ವಾಮಿ ವಿವೇಕಾನಂದರನ್ನು ಅತ್ಯಂತ ಸೂಕ್ಷ್ಮವಾದ ಘಂಟೆಗೆ ಹೋಲಿಸುತ್ತಾರೆ. ಆ ಘಂಟೆಯನ್ನು ಕೊಂಚ ಸ್ಪರ್ಶಿಸಿದರೆ ಸಾಕು ಅದು ಭಾರತಕ್ಕೆ ಸಂಬಧಿಸಿದ ಯಾವುದೇ ವಿಷಯವನ್ನಾಗಲೀ ಅದು ಝೇಂಕರಿಸುತ್ತಿತ್ತು. ದೇಶದ ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಅವರಿಗೆ ಅಗಾಧವಾದ ಹೆಮ್ಮೆಯಿತ್ತು. ಆಳವಾಗಿ ಅಧ್ಯಯನ ಮಾಡಿದ್ದ ಅವರು ದೇಶದ ಉದ್ದಗಲ ಪರಿಭ್ರಮಣದ ಮೂಲಕವೂ ಪಡೆದಂತಹ ಜ್ಞಾನವು ಅವರನ್ನು ಮಹಾ ದೇಶಭಕ್ತರನ್ನಾಗಿ ಪರಿವರ್ತಿಸಿತು ಎಂದು ಹೇಳಿದ್ದಾರೆ.

---

[1] ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ, ಸಂಪುಟ 3, ಪು.ಸಂ.159

[2] ಅದೇ., ಪು.ಸಂ. 159

ಆಧ್ಯಾತ್ಮಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ವೈಜ್ಞಾನಿಕವಾಗಿ, ಪ್ರತಿಯೊಂದರಲ್ಲಿಯೂ ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠ ಮಟ್ಟದಲ್ಲಿದ್ದ ಭಾರತದ ವೈಭವವೆಲ್ಲಾ ಕೆಳಮಟ್ಟಕ್ಕೆ ಇಳಿಯುತ್ತಿದೆ. ನೂರಾರು ವರ್ಷಗಳ ಪಾಶ್ಚಾತ್ಯರ ಆಡಳಿತದಿಂದಾಗಿ ತಮ್ಮ ಸ್ವಾಭಿಮಾನವನ್ನು ಕಳೆದುಕೊಂಡ ಭಾರತೀಯರು ತಮ್ಮ ಪ್ರಾಚೀನ ವೈಭವವನ್ನೆಲ್ಲಾ ಮರೆತು, ಕೀಳರಿಮೆಯ ಅಧಃಪಾತಳಕ್ಕೆ ಇಳಿದು, ತಮ್ಮ ಧರ್ಮ ಸಂಸ್ಕೃತಿಯನ್ನೇ ಕೀಳಾಗಿ ನೋಡುವ ಮನಃಸ್ಥಿತಿಯನ್ನು ಹೊಂದಿರುವುದನ್ನು ಕಂಡ ವಿವೇಕಾನಂದರು "ಯಾವುದೇ ಒಬ್ಬ ವ್ಯಕ್ತಿಯಾಗಲಿ, ಜನಾಂಗವಾಗಲಿ ತನ್ನನ್ನೇ ತಾನು ಕೀಳಾಗಿ ಕಾಣುತ್ತಾ ತನ್ನನ್ನೇ ತಾನು ದ್ವೇಷಿಸುವ ಮಟ್ಟಕ್ಕೆ ಇಳಿದರೆ ಅದೇ ಅವನತಿಯ ಹೆಬ್ಬಾಗಿಲು. ಎಲ್ಲ ರೀತಿಯಲ್ಲೂ ಆಗ ಜನಾಂಗ ದುರ್ಬಲವಾಗುತ್ತದೆ. ಇದೇ ನೈತಿಕ ಅಧಃಪತನಕ್ಕೆ ಕಾರಣ ಹಾಗೂ ಸೃಜನಾತ್ಮಕತೆಯ ಕೊರತೆಗೂ ಕಾರಣವಾಗುತ್ತದೆ" ಎಂದು ಹೇಳಿದ್ದಾರೆ. ಸ್ವಾಮಿ ವಿವೇಕಾನಂದರ ಜೀವನ ಹಾಗೂ ಸಂದೇಶಗಳ ಪ್ರಭಾವದಿಂದ ನೂರಾರು ಸ್ವಾತಂತ್ರ್ಯ ಹೋರಾಟಗಾರರು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮನ್ನೇ ತಾವು ಅರ್ಪಿಸಿಕೊಂಡರು. ಅವರ ಧಮನಿ ಧಮನಿಯಲ್ಲಿಯೂ ವಿವೇಕಾನಂದರ ಸ್ಫೂರ್ತಿಯ ಬಿಸಿ ನೆತ್ತರು ಹರಿಯುತ್ತಿತ್ತು. ಅಂತಹ ಮಹನೀಯ ವ್ಯಕ್ತಿಗಳಲ್ಲಿ ಅರವಿಂದ ಘೋಷರು ಒಬ್ಬರಾಗಿದ್ದಾರೆ. ಸ್ವಾಮಿ ವಿವೇಕಾನಂದರ ವಿಚಾರ ಧಾರೆಯನ್ನು ಸಂಪೂರ್ಣವಾಗಿ ಅರಿತ ಅರವಿಂದರು ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು ಎಂಬುದನ್ನು ನಾವು ಇಲ್ಲಿ ಸ್ಮರಿಸಬಹುದಾಗಿದೆ.

ಭಾರತ ದೇಶವು ಕಂಡಂತಹ ಮಹಾನ್ ದಂಡನಾಯಕರಾದ, ಸ್ವಾತಂತ್ರ್ಯ ಪ್ರೇಮಿಯಾದ ಸುಭಾಷ್ ಚಂದ್ರ ಬೋಸ್ ರವರು ಕೇವಲ ಹದಿನೈದು ವರ್ಷದವರಾಗಿದ್ದಾಗಲೇ ಸ್ವಾಮಿ ವಿವೇಕಾನಂದರಿಂದ ಪ್ರಭಾವಿತರಾಗಿದ್ದರು. ವಿವೇಕಾನಂದರ ಯುವ ಸಂದೇಶಗಳನ್ನೊಳಗೊಂಡ ಪುಸ್ತಕಗಳನ್ನು ಆಳವಾಗಿ ಅಭ್ಯಾಸಿಸಿ ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರಲು ಮುಂದಾದರು. ನೇತಾಜಿಯವರು "ಇಂದಿನ ಯುವಜನತೆ ಇಂತಹ ವಿದ್ಯುತ್ ವಾಣಿಯಿಂದ ತಮ್ಮ ತಮ್ಮ ತಾಮಸಿಕ ಮನಸ್ಥಿತಿಯನ್ನು ಕೊಡವಿ ಎದ್ದು ಸ್ವಾಮಿ ವಿವೇಕಾನಂದರ ಸಿಂಹವಾಣಿಯ ಘರ್ಜನೆಯನ್ನು ಆಲಿಸಿ ತನ್ಮೂಲಕ ಪರಿಪೂರ್ಣ ಮಾನವರಾಗಿ ಮೌಲ್ಯಾಧಾರಿತ ಜೀವನವನ್ನು ನಡೆಸುವಂತಹ ಕೆಚ್ಚೆದೆಯುಳ್ಳವರಾಗಬೇಕು" ಎಂದು ವಿವರಿಸಿದ್ದಾರೆ.

ಭವಿಷ್ಯ ಭಾರತ ಕುರಿತ ಸ್ವಾಮಿ ವಿವೇಕಾನಂದರ ಕಲ್ಪನೆ ಕೇವಲ ರಾಜಕೀಯ ಸ್ವಾತಂತ್ರ್ಯಕ್ಕೆ ಮಾತ್ರ ಸೀಮಿತವಾಗಿರದೆ, ಸಮಾನತೆಯನ್ನು ಬಯಸಿದ್ದರು. ಪ್ರತಿಯೊಬ್ಬರು ಪ್ರತಿಯೊಂದು ವಿಷಯದಲ್ಲಿಯೂ ಸಮಾನರು ಎಂಬುದನ್ನು ಅರಿತ ಅವರು ವೈವಿಧ್ಯತೆಯೇ ಸೃಷ್ಟಿಯ ನಿಯಮ ಎಂದು ಸಾರಿದರು. ಜೀವ ವೈವಿಧ್ಯತೆಯನ್ನು ಬಯಸುವಂತೆ, ಸಾಂಸ್ಕೃತಿಕ ವೈವಿಧ್ಯತೆಯನ್ನೂ, ಧರ್ಮ ವೈವಿಧ್ಯತೆಯನ್ನೂ ನಾವು ಬಯಸಬೇಕು. ಈ ಎಲ್ಲ ವೈವಿಧ್ಯಗಳ ಹಿಂದೆ ಒಂದು ಏಕತೆಯೆಂಬ ಸೂತ್ರವೂ ಇರಬೇಕು. ಪ್ರತಿಯೊಬ್ಬರು ಸಮಾನರಾಗಿದ್ದು, ಸಮಾನ ಅವಕಾಶಗಳು ದೊರೆಯಬೇಕು. ಅರ್ಥ, ವಿದ್ಯೆ, ಸಂಸ್ಕೃತಿ, ಧರ್ಮ ಮುಂತಾದ ವಿಷಯಗಳಲ್ಲಿ ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಬೇಕು. ಸಮಾಜ ಯಾವುದೇ ವರ್ಗದ ವಿಶೇಷ ಸ್ವತ್ತು ಆಗಬಾರದು. ಸಮಾಜದಲ್ಲಿ ವಿವಿಧ ವರ್ಗಗಳು ಇರುವುದು ಸರ್ವ ಸಾಮಾನ್ಯ ಆದರೆ ಮೇಲು–ಕೀಳೆಂಬ ಭಾವನೆ ಇರಕೂಡದು.

ಅಸ್ಪೃಶ್ಯತೆಯನ್ನು ಖಂಡಿಸಿದ ಸ್ವಾಮಿ ವಿವೇಕಾನಂದರು ನಮ್ಮ ಧರ್ಮವು ಅಡಿಗೆ ಮನೆಯ ಧರ್ಮವಾಗಿದೆ. ಅಡುಗೆ ಮಾಡುವ ಪಾತ್ರೆ ನಮ್ಮ ದೇವರು. 'ನಾನು ಮಡಿ, ನನ್ನನ್ನು ಮುಟ್ಟಬೇಡಿ' ಇದು ನಮ್ಮ ಧರ್ಮವಾಗಿದೆ. ಇದೇ ರೀತಿ ಮತ್ತೊಂದು ಶತಮಾನ ಕಳೆದರೆ ನಾವೆಲ್ಲ ಹುಚ್ಚರ ಆಸ್ಪತ್ರೆಯನ್ನು ಸೇರಬೇಕಾಗುತ್ತದೆ. ಅಸ್ಪೃಶ್ಯತೆ ಮತ್ತು ಶೂದ್ರದಮನ ಇವೆರಡು ನಾವೆಸಗಿದ ಮಹಾಪರಾಧವಾಗಿದ್ದು, ಸುಮಾರು ಕಾಲು ಭಾಗದಷ್ಟು ಮಂದಿಯನ್ನು ನಾವು ಸಾವಿರಾರು ವರ್ಷಗಳಿಂದ ಸಮಾಜ, ಸಂಸ್ಕೃತಿ, ಧರ್ಮಗಳಿಂದ ಆಚೆ ನೂಕಿದೆವು. ಅವರೆಲ್ಲ ಅಶುದ್ಧರೆಂದು ಅವರು ನಮ್ಮ ಹತ್ತಿರ ಬಂದರೂ ದೂರ ಇರಿಸಿದೆವು. ಮತ್ತೆ ಕೆಲವರನ್ನು ಶೂದ್ರರೆಂದು ಪರಿಗಣಿಸಿ ಕೆಲಸಗಳನ್ನೆಲ್ಲಾ ಅವರಿಂದಲೇ ಮಾಡಿಸಿಕೊಂಡು ವೈದಿಕ ಸಂಸ್ಕೃತಿಯಿಂದ ಹೊರ ನೂಕಿದೆವು ಎಂಬುದಾಗಿ ನೊಂದು ನುಡಿಯುತ್ತಾರೆ. ವಿವೇಕಾನಂದರು ಆದರ್ಶ ಸಮಾಜದ ಕಲ್ಪನೆಯನ್ನು ಹೀಗೆ ವಿವರಿಸುತ್ತಾರೆ ನಾಲ್ಕು ವರ್ಣಗಳು ಯಾವ ರೀತಿ ಒಂದಾದ ಮೇಲೊಂದರಂತೆ ಸಮಾಜವನ್ನು ಆಳ್ವಿಕೆ ಮಾಡುತ್ತವೆ ಎಂಬುದನ್ನು ವಿವರಿಸುತ್ತಾ "ಬ್ರಾಹ್ಮಣ ಯುಗದ ಜ್ಞಾನವನ್ನು ಕ್ಷತ್ರಿಯ ಯುಗದ ಸಂಸ್ಕೃತಿಯನ್ನು ವೈಶ್ಯಯುಗದ ವಿತರಣಾ ವ್ಯವಸ್ಥೆಯನ್ನು, ಕೊನೆಯ ವರ್ಗದ ಸಮಾನತೆಯ ಆದರ್ಶವನ್ನು ಇವುಗಳೆಲ್ಲದರ ದೋಷಗಳನ್ನು ಕಳೆದು, ಒಗ್ಗೂಡಿಸಲು ಸಾಧ್ಯವಾದರೆ ಅದು ಆದರ್ಶ ಸಮಾಜವಾಗಬಲ್ಲದು".

ಹಾಗೆಯೇ ಮುಂದುವರೆದು "ಇದು ಸಾಧ್ಯವೇ?" ಎಂದು ಅವರೇ ಸಂದೇಹಿಸುತ್ತಾರೆ. ಅವರ ದೃಷ್ಟಿಯಲ್ಲಿ ಯಾವ ಸಮಾಜವು ಪರಿಪೂರ್ಣವಲ್ಲ. ಈ ವಿಶ್ವದಲ್ಲಿ ಪ್ರತಿಯೊಂದು ಸಹ ಒಳ್ಳೆಯದು ಕೆಟ್ಟದುಗಳ ಮಿಶ್ರಣವಾಗಿದೆ. ಪ್ರತಿಯೊಬ್ಬನೂ ತನ್ನ ಆಂತರಿಕ ದಿವ್ಯತೆಯನ್ನು ವ್ಯಕ್ತಗೊಳಿಸಿ ಹಂತ ಹಂತವಾಗಿ ಸಮಾಜವನ್ನು ಮೀರಿ ಹೋಗಲು ಅವಕಾಶವಿರಬೇಕು ಅಂತಹ ಸಮಾಜ ಮಾತ್ರ ಆದರ್ಶ ಸಮಾಜವಾಗಬಲ್ಲದು. ಭವಿಷ್ಯ ಭಾರತದಲ್ಲಿ ಇಂತಹ ಆದರ್ಶ ಸಮಾಜವೊಂದು ನಿರ್ಮಾಣವಾಗಬೇಕೆಂಬುದು ವಿವೇಕಾನಂದರ ಕನಸಾಗಿತ್ತು.

ಬಡತನ ರಹಿತ ಸಮಾಜವನ್ನು ಬಯಸಿದ್ದ ಅವರು ಬಡತನಕ್ಕೆ ಕಾರಣವೇನೆಂಬುದನ್ನು ಸಹ ಅರಿತಿದ್ದರು. ಐರೋಪ್ಯರು ನಮ್ಮ ದೇಶದ ಸಂಪತ್ತನ್ನು ಕೊಳ್ಳೆಒಡೆದದ್ದು ಮೊದಲ ಕಾರಣವಾದರೆ, ಎರಡನೆಯದಾಗಿ ಮೇಲ್ಜಾತಿಯವರಿಂದ ಆದಂತಹ ಶೋಷಣೆಯಾಗಿದೆ. ವಿವೇಕಾನಂದರು ಹೇಳುವಂತೆ ನಮ್ಮ ಭಾರತ ದೇಶವು ಸಂಪದ್ಭರಿತ ರಾಷ್ಟ್ರವಾಗಿದ್ದು, ಐರೋಪ್ಯರು ನಮ್ಮ ದೇಶಕ್ಕೆ ಬರುವ ಮುನ್ನ ಅವರೇ ನೋಡಿ ಆಶ್ಚರ್ಯ ಪಡುವಷ್ಟು ಸಂಪದ್ಭರಿತವಾಗಿತ್ತು. ಐರೋಪ್ಯರು ಬಂದು ಆ ಸಂಪತ್ತನ್ನೆಲ್ಲಾ ಲೂಟಿ ಮಾಡಿದ್ದೆ ಬಡತನಕ್ಕೆ ಕಾರಣವಾಯಿತು. ಐರೋಪ್ಯರ ನವ ನಾಗರಿಕತೆ ನಿರ್ಮಾಣವಾಗಬೇಕಾದರೆ ನಮ್ಮ ಭಾರತದ ಐಶ್ವರ್ಯವೇ ಕಾರಣ ಎಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ. "ಭಾರತದ ವ್ಯಾಪರ ಮತ್ತು ಭಾರತದ ಆದಾಯವೆಲ್ಲ ಈಗ ಆಂಗ್ಲರ ವಶದಲ್ಲಿದೆ; ಅದಕ್ಕೆ ಅವರು ಎಲ್ಲ ರಾಷ್ಟ್ರಗಳಿಗಿಂತ ಮೇಲಿರುವುದು...... ಇದನ್ನು ಐರೋಪ್ಯರು ಒಪ್ಪಿಕ್ಕೊಳ್ಳುವುದಿಲ್ಲ. ಅವರ ಐಶ್ವರ್ಯ, ನಾಗರೀಕತೆಗಳಿಗೆ ಭಾರತ ಮತ್ತು ಇಲ್ಲಿನ ಸ್ಥಳೀಯ ಜನ ಕಾರಣರೆಂಬ ಸತ್ಯವನ್ನು ಅವರು ಒಪ್ಪಿಕೊಳ್ಳಲು ಇಚ್ಛಿಸುವುದಿಲ್ಲ". ಮತ್ತೆ ಹಿಂದಿನಂತಾಗಲು ಪಾಶ್ಚಾತ್ಯರ ವಿಜ್ಞಾನ ಮತ್ತು ತಾಂತ್ರಿಕತೆಯನ್ನು ಕಲಿತು, ನಮ್ಮ ಸಂಸ್ಕೃತಿಯನ್ನು ಬಲಿಕೊಡದೆ ಬಡಜನರಿಗೆ ಹೆಚ್ಚಿನ ಉದ್ಯೋಗವನ್ನು ಒದಗಿಸಿ, ಅವರ ದುಡಿಮೆಯಲ್ಲಿ ಮಧ್ಯವರ್ತಿಗಳು

ಬರದೆ, ಅವರ ದುಡಿಮೆಯ ಪಾಲು ಅವರಿಗೆ ಸಿಗುವಂತಾಗಬೇಕು. ತಮ್ಮ ಕಾಲುಗಳ ಮೇಲೆ ತಾವು ನಿಲ್ಲುವಂತಾಗಬೇಕು. ಆತ್ಮ ವಿಶ್ವಾಸದಿಂದ, ಆತ್ಮಗೌರವದಿಂದ ಘನತೆಯ ಜೀವನವನ್ನು ಸಾಗಿಸಬೇಕೆಂಬ ಕನಸನ್ನು ವಿವೇಕಾನಂದರು ಕಂಡಿದ್ದರು.

ಅದಕ್ಕೆ ಪೂರಕವಾಗಿ ಸಾಮಾನ್ಯ ಜನರಿಗೆ ಶಿಕ್ಷಣ ದೊರಕುವಂತಾಗಬೇಕು. ಶಿಕ್ಷಣವೆಂದರೆ ಕೇವಲ ವಿಷಯ ಸಂಗ್ರಹವಲ್ಲ, ಬುದ್ಧಿ ಮತ್ತು ಭಾವಗಳೆರಡಕ್ಕೂ ಪುಷ್ಟಿಯನ್ನು ನೀಡುವ, ಚಾರಿತ್ರ್ಯವನ್ನು ನಿರ್ಮಾಣ ಮಾಡುವ, ಚಿಂತನಾ ಸ್ವಾತಂತ್ರ್ಯವನ್ನು ಒದಗಿಸುವ, ಪರಾವಲಂಬನೆಯನ್ನು ಹೋಗಲಾಡಿಸಿ ಆತ್ಮವಿಶ್ವಾಸವನ್ನು ಒದಗಿಸುವ, ದೇಶಭಿಮಾನವನ್ನು ಹೆಚ್ಚಿಸುವ, ಭಾರತೀಯ ಸಂಸ್ಕೃತಿಯಲ್ಲಿ ಗೌರವವನ್ನು ಅಧಿಕಗೊಳಿಸುವ, ಧರ್ಮ ಹಾಗೂ ಆಧ್ಯಾತ್ಮಿಕ ಶ್ರದ್ಧೆಯನ್ನು ವೃದ್ಧಿಸುವ ಆದರ್ಶ ಶಿಕ್ಷಣವನ್ನು ಬಯಸಿದ್ದ ವಿವೇಕಾನಂದರು ಪಾಶ್ಚಾತ್ಯ ನಡೆನುಡಿಗಳನ್ನು ಅನುಕರಿಸುವುದು ಶಿಕ್ಷಣವಲ್ಲ. ಇತರರಿಂದ ಕಲಿಯಬೇಕು, ಅದನ್ನು ನಮ್ಮದಾಗಿಸಿಕೊಳ್ಳಬೇಕೆ ಹೊರತು ನಾವು ಇತರರಾಗಬಾರದು. "ನಮ್ಮ ದೇಶಿಯ ಉಡುಪು, ಆಹಾರ ಮತ್ತು ಜೀವನ ಕ್ರಮವನ್ನು ಬಿಡುವುದರಿಂದ ನಾವು ರಾಷ್ಟ್ರೀಯತೆಯನ್ನು ಕಳೆದುಕೊಳ್ಳುತ್ತೇವೆ. ನಾವು ಎಲ್ಲರಿಂದಲೂ ಕಲಿತುಕೊಳ್ಳಬಹುದು. ಆದರೆ ಯಾವುದನ್ನು ಕಲಿಯುವುದರಿಂದ ನಮ್ಮ ರಾಷ್ಟ್ರದ ವೈಶಿಷ್ಟತೆಯನ್ನು ಕಳೆದುಕೊಳ್ಳುತ್ತೇವೆಯೋ ಅಂತಹವರಿಂದ ನಮ್ಮ ಏಳಿಗೆಗೇನೂ ಸಹಾಯವಾಗುವುದಿಲ್ಲ, ಅಷ್ಟೇ ಅಲ್ಲ ನಾವು ಅಧೋಗತಿಗಿಳಿಯುತ್ತೇವೆ". ಇದರಿಂದ ಅನುಕರಣೆಯ ದಾಸ್ಯ ಮನೋಭಾವ ಉಂಟಾಗುತ್ತದೆ. ವಿದ್ಯೆ, ಕಲೆ, ಸಾಹಿತ್ಯ, ಸಂಗೀತ, ಧರ್ಮ ಮುಂತಾದ ಎಲ್ಲ ವಿಷಯದಲ್ಲಿಯೂ ಪಾಶ್ಚಾತ್ಯರ ಕಡೆ ತಿರುಗುವುದರಿಂದ ನಮ್ಮ ತನವನ್ನು ನಾವು ಕಳೆದುಕೊಂಡು ನಾವು ಭಿಕ್ಷುಕರಂತಾಗುತ್ತೇವೆ. ಇದರಿಂದ ಹೊರಬರಲು, ನಮಗಿಂದು ಬೇಕಾಗಿರುವುದು ಪೌರುಷರಾದಂತಹ ಮನುಷ್ಯರು. ಅಂತವರನ್ನು ಮೊದಲು ನಿರ್ಮಾಣ ಮಾಡಿ. "ನಮ್ಮ ದೇಶಕ್ಕಿಂದು ಬೇಕಾಗಿರುವುದು ಕಬ್ಬಿಣದಂತಹ ಮಾಂಸ ಖಂಡಗಳು, ಉಕ್ಕಿನಂತಹ ನರಗಳು, ಯಾವುದನ್ನು ಲೆಕ್ಕಿಸದೆ ವಿಶ್ವದ ರಹಸ್ಯತಮ ಸತ್ಯಗಳನ್ನು ಬೇರ್ಪಡಿಸಿ ಸಾಧ್ಯವಾದರೆ ಕಡಲಿನ ಆಳಕ್ಕಾದರೂ ಹೋಗಿ ಮೃತ್ಯುವಿನೊಂದಿಗೆ ಹೋರಾಡಿ ಗುರಿಯನ್ನು ಸಾಧಿಸಬಲ್ಲಂತಹ ಅದಮ್ಯ ಪ್ರಚಂಡ ಇಚ್ಛಾಶಕ್ತಿ" ಯುಳ್ಳವರು ಬೇಕೆಂದಿದ್ದಾರೆ.

ವಿವೇಕಾನಂದರ ಪ್ರಕಾರ ಧರ್ಮವೇ ಭಾರತದ ಬೆನ್ನೆಲುಬಾಗಿದ್ದು, ಭಾರತವು ಎಂದಿಗೂ ತನ್ನ ಧರ್ಮ ಮತ್ತು ಆಧ್ಯಾತ್ಮಿಕತೆಯನ್ನು ಬಿಟ್ಟುಕೊಡಬಾರದು. ಇಲ್ಲಿಯ ಸಾಮಾಜಿಕ ವ್ಯವಸ್ಥೆ, ಸಂಸ್ಕೃತಿ ಪ್ರತಿಯೊಂದೂ ಸಹ ಧರ್ಮದ ಮೂಲವಾಗಿದೆ. ಇದನ್ನು ಕಳೆದುಕೊಂಡಲ್ಲಿ ನಿಜವಾದ ಭಾರತ ಅಳಿದು, ಕೇವಲ ಭೌಗೋಳಿಕ ಭಾರತ ಮಾತ್ರ ಉಳಿಯುತ್ತದಷ್ಟೆ. ಅಂದಿನ ಪುರಾತನ ರಾಷ್ಟ್ರಗಳಾದ ಈಜಿಪ್ಟ್, ಬ್ಯಾಬಿಲೋನಿಯಾ, ಗ್ರೀಕ್, ರೋಮ್, ಪರ್ಷಿಯಾ ಮುಂತಾದವು ನಶಿಸಿಹೋಗಿರುವಂತೆ ನಮ್ಮ ಭಾರತವೂ ಸಹ ನಶಿಸಿಹೋಗುತ್ತದೆ. ವಿವೇಕಾನಂದರು ಹೇಳುತ್ತಾರೆ: "ಭರತ ಖಂಡದಲ್ಲಿ ಎಲ್ಲ ವಿಧದ ಜಾಗೃತಿ ಫಲಕಾರಿಯಾಗಬೇಕಾದರೆ ಮೊದಲು ಧಾರ್ಮಿಕ ಜಾಗೃತಿ ಅವಶ್ಯಕ. ರಾಜಕೀಯ ಮತ್ತು ಸಾಮಾಜಿಕ ವಿಷಯಗಳಿಂದ ಭರತ ಖಂಡವನ್ನು ತುಂಬುವುದಕ್ಕೆ ಮುಂಚೆ ಆಧ್ಯಾತ್ಮಿಕ ಭಾವನೆಗಳ ಮಳೆಗರೆಯಿರಿ. ಮೊದಲು ನಾವು ಲಕ್ಷ್ಯದಲ್ಲಿಡಬೇಕಾದುದು ಇದು. ನಮ್ಮ ಉಪನಿಷತ್ತು, ಶಾಸ್ತ್ರ, ಪುರಾಣಗಳಲ್ಲಿರುವ ಅದ್ಭುತ ಸತ್ಯಗಳು ಪ್ರಚಾರವಾಗಬೇಕು. ಮಠಗಳಿಂದ, ಕಾನನಗಳಿಗೆ ಇವು

ಮೀಸಲಾಗಿವೆ ಎಂದು ಭಾವಿಸಿದ ಕೆಲವು ಜನರಿಂದ ಹೊರಗೆ ತಂದು ಎಲ್ಲರಿಗೂ ಪ್ರಚಾರ ಮಾಡಬೇಕು. ಈ ಭಾವನೆ ಬೆಂಕಿಯಂತೆ ಉತ್ತರದಿಂದ ದಕ್ಷಿಣಕ್ಕೆ, ಪೂರ್ವದಿಂದ ಪಶ್ಚಿಮಕ್ಕೆ, ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ, ಸಿಂಧುವಿನಿಂದ ಬ್ರಹ್ಮಪುತ್ರದವರೆಗೆ ಹರಿಯಬೇಕು. ಪ್ರತಿಯೊಬ್ಬರೂ ಇದನ್ನು ತಿಳಿದುಕೊಳ್ಳಬೇಕು".

ಭರತ ಖಂಡವು ಅನಾದಿ ಕಾಲದಿಂದಲೂ ನೈತಿಕತೆಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದು, ಎಲ್ಲ ಆಚರಣೆಗಳೂ ನೀತಿ ಬದ್ಧವಾಗಿರಬೇಕು. ಭೌತಿಕವಾಗಿ, ಮಾನಸಿಕವಾಗಿ ಜನರು ದುರ್ಬಲರಾದರೆ ಅನೈತಿಕತೆ ತಲೆದೋರುತ್ತದೆ. ಪ್ರತಿಯೊಂದು ಸೇವಾ ಕಾರ್ಯಗಳೂ ನೈತಿಕತೆಯ ತಳಹದಿಯ ಮೇಲೆಯೇ ನಡೆಯಬೇಕು ಎಂಬುದು ವಿವೇಕಾನಂದರ ಆಶಯವಾಗಿತ್ತು. ದಕ್ಷ ಆಡಳಿತದ ಬಲದಿಂದ ಅನೈತಿಕತೆಯನ್ನು ಸ್ವಲ್ಪಮಟ್ಟಿಗಾದರೂ ತಪ್ಪಿಸಬಹುದಾದರೂ, ಆಡಳಿತ ದುರ್ಬಲವಾದಾಗ ಅನೈತಿಕತೆ ಮತ್ತೆ ತಾಂಡವವಾಡುತ್ತದೆ. ಆದ್ದರಿಂದ ಜನರ ಮನಸ್ಥಿತಿಯೇ ಬದಲಾಗಿ ನೈತಿಕತೆ ಅವರ ಸ್ವಾಭಾವವಾಗಬೇಕು. ಆಗ ಎಂತಹ ಸ್ಥಿತಿಯಲ್ಲಿಯೂ ಅವರು ನೀತಿವಂತರಾಗಿ ಬಾಳುತ್ತಾರೆ. ಈ ಕಾರಣದಿಂದಾಗಿಯೇ ವಿವೇಕಾನಂದರು ಚಾರಿತ್ರ್ಯ ನಿರ್ಮಾಣಕ್ಕೆ ಹೆಚ್ಚು ಒತ್ತನ್ನು ನೀಡಿರುವರು. "ಎಲ್ಲ ಮನೆಗಳನ್ನು ದಾನಗೃಹವನ್ನಾಗಿ ನೀವು ಪರಿವರ್ತಿಸಬಹುದು, ಎಲ್ಲೆಲ್ಲಿಯೂ ನೀವು ಔಷಧಾಲಯವನ್ನು ತೆರೆಯಬಹುದು. ಆದರೆ ಮಾನವನ ಚಾರಿತ್ರ್ಯ ಬದಲಾಗದಿದ್ದರೆ ಜನರ ದುಃಖಕ್ಕೆ ಕೊನೆಯಿರದು" ಎಂದಿದ್ದಾರೆ. ಸಮಾಜಕ್ಕೆ ನಾವು ಸಲ್ಲಿಸಬಹುದಾದ ಅತ್ಯಂತ ಶ್ರೇಷ್ಠ ಸೇವೆ ಯಾವುದೆಂದರೆ ಜನರಲ್ಲಿ ನೈತಿಕ ಶಕ್ತಿಯ ಶ್ರದ್ಧೆಯನ್ನು ಹೆಚ್ಚಿಸುವುದು. ನೀತಿವಂತವೂ ಆಧ್ಯಾತ್ಮಿಕ ಸಂಪನ್ನವೂ ಬಡತನ ರಹಿತವೂ ಸಂಪದ್ಭರಿತವೂ ಸರ್ವಸಮಾನತೆಯಿಂದ ಕೂಡಿದ್ದು, ಸಂಸ್ಕೃತಿಯಲ್ಲಿ ವಿಶ್ವಶ್ರೇಷ್ಠವೂ ಅಜೇಯವೂ ಆದ ಭವ್ಯ ಭಾರತ ಇದು ಸ್ವಾಮಿ ವಿವೇಕಾನಂದರ ಭವಿಷ್ಯ ಭಾರತದ ಕಲ್ಪನೆಯಾಗಿತ್ತು.

ಹೀಗೆ ಭಾರತೀಯ ಸಂಸ್ಕೃತಿಯು ತನ್ನದೇ ಆದ ಆಚಾರ ವಿಚಾರಗಳನ್ನು ಮತ್ತು ಸಂಪ್ರದಾಯಗಳನ್ನು ಹೊಂದಿದೆ. ನಮ್ಮ ಸಮಾಜದ ವ್ಯವಸ್ಥೆಯಾಗಿರಬಹುದು, ಕುಟುಂಬದ ವ್ಯವಸ್ಥೆಯಾಗಿರಬಹುದು, ಆಚಾರ–ವಿಚಾರಗಳಾಗಿರಬಹುದು ಇವುಗಳೆಲ್ಲವೂ ಪಾಶ್ಚಾತ್ಯರ ಸಾಮಾಜಿಕ ವ್ಯವಸ್ಥೆಗಿಂತ ಭಿನ್ನವಾಗಿರುವುದನ್ನು ನಾವು ಕಾಣುತ್ತೇವೆ. ಅಸಂಖ್ಯಾತ ವರ್ಷಗಳವರೆಗೆ ಹಬ್ಬಿರುವ ಸುಧೀರ್ಘ ಮತ್ತು ಅವಿಚ್ಛಿನ್ನ ಧಾರೆಯಂತೆ ಭವ್ಯವಾದ ಐತಿಹಾಸಿಕ ಪರಂಪರೆಯನ್ನು ಹೊಂದಿದ ನಾಡಾಗಿದೆ ನಮ್ಮ ಭರತಖಂಡ. ಸತ್ಯ, ಅಹಿಂಸೆ, ವಿಶ್ವಪ್ರೇಮ, ವಿಶಾಲ ಮನೋಭಾವ, ಹೃದಯ ವೈಶಾಲ್ಯತೆ, ದಾನಶೀಲತೆ, ಔದಾರ್ಯ ಪೂರ್ಣವಾದ ಆತಿಥ್ಯ ಮತ್ತು ಇತರ ಎಲ್ಲಾ ಮೂಲಭೂತ ಮೌಲ್ಯಗಳೆಲ್ಲ ಅಡಗಿರುವ ನಮ್ಮ ಸಂಸ್ಕೃತಿಯು ರಚನಾತ್ಮಕವಾದ ಸಮಗ್ರ ಅರಿವನ್ನು ಹಾಗೂ ಆಧ್ಯಾತ್ಮಿಕ ಜ್ಞಾನವನ್ನು ಪ್ರತಿಬಿಂಬಿಸುವುದಾಗಿದೆ. ನಮ್ಮ ಸಮಾಜವು ಶಂಕರ, ರಾಮಾನುಜರಂತಹ ಪರಿಜ್ಞಾನ ಪಡೆದ ದಾರ್ಶನಿಕರನ್ನ, ಬುದ್ಧನಂತಹ ಉತ್ಕೃಷ್ಟ ಬೋಧಕನನ್ನು, ಅಶೋಕನಂತಹ ಮಹಾಶ್ರೇಷ್ಠ ಚಕ್ರವರ್ತಿಯನ್ನು, ಕಾಳಿದಾಸನಂತಹ ಅದ್ವಿತೀಯ ಕವಿಗಳನ್ನು ಮತ್ತು ಅದ್ಭುತ ಕಲೆಗಳು, ದೇವಾಲಯಗಳು, ಸುಂದರ ಕಲಾಕೃತಿಗಳನ್ನು ಹೊಂದಿದೆ. ವಿಭಿನ್ನ ಜನಾಂಗ, ವಿವಿಧ ಸಾಮಾಜಿಕ ಮತ್ತು ಸಾಂಸ್ಕೃತಿಕ ವಾಹಿನಿಗಳನ್ನೆಲ್ಲಾ ಆಹ್ವಾನಿಸಿ ಅವುಗಳ ಸಾರವನ್ನೆಲ್ಲಾ ಸ್ವಾಧಿಸಿ ಒಂದು ದೊಡ್ಡ ಸರೋವರವಾಗಿದೆ ನಮ್ಮ ಭಾರತೀಯ

ಸಮಾಜ. ಅಲ್ಲದೆ ತನ್ನ ವ್ಯಕ್ತಿತ್ವವನ್ನು ಹಾಗೂ ತನ್ನ ತನವನ್ನು ಯಾವ ಪ್ರಭಾವಕ್ಕೂ ಒಳಗಾಗಿಸದೆ ಕಾಪಾಡಿಕೊಂಡು ಬಂದಿದೆ. ಪರಸ್ಪರ ಸಹಕಾರ ಮತ್ತು ಮೈತ್ರಿಯೇ ನಮ್ಮ ಭಾರತ ದೇಶದ ಪ್ರವೃತ್ತಿಯಾಗಿದ್ದು, ಇತರ ಒಳ್ಳೆಯ ಅಂಶಗಳನ್ನೆಲ್ಲಾ ತೆರೆದ ಹೃದಯದಿಂದ ಒಪ್ಪಿಕೊಂಡು, ಜನಹಿತಕ್ಕೆ ಅವಶ್ಯಕವೆಂಬುದಾಗಿ ಕಂಡುಬಂದ ವಿಷಯಗಳನ್ನೆಲ್ಲಾ ತನ್ನ ಸಂಸ್ಕೃತಿಗೆ ಸೇರಿಸಿಕೊಂಡಿದೆ. ಆದುದರಿಂದ ಭಾರತೀಯ ಸಂಸ್ಕೃತಿಯು ಸಮೃದ್ಧವಾದ ಬೆಳೆಯಂತೆ ಭವ್ಯವಾಗಿ ಬೆಳೆದು ಬಂದಿರುವುದನ್ನು ನಾವು ಕಾಣುತ್ತೇವೆ.

**ಉಪಸಂಹಾರ**

ಈ ರೀತಿಯ ಭವ್ಯ ಸಂಸ್ಕೃತಿಯನ್ನು ಹೊಂದಿರುವಂತಹ ಭಾರತ ದೇಶವನ್ನು ಉಳಿಸಿ, ಬೆಳೆಸಬೇಕಾದುದು ಪ್ರತಿಯೊಬ್ಬ ಭಾರತೀಯರ ಕರ್ತವ್ಯವಾಗಿದೆ. ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾಗಿರುವ ಇಂದಿನ ನಮ್ಮ ಯುವ ಜನಾಂಗವು ಪಾಶ್ಚಾತ್ಯರ ಜೀವನ ಶೈಲಿಯನ್ನು ಅನುಸರಿಸುತ್ತಿದ್ದು, ನಮ್ಮ ಸಂಸ್ಕೃತಿ, ಧರ್ಮ ಮತ್ತು ಪರಂಪರೆಯನ್ನು ಕೀಳಾಗಿ ಕಡೆಗಣಿಸುತ್ತಿದ್ದು, ಆಧುನಿಕ ಮಾನವನ ಜೀವನದಲ್ಲಿ ಪಾರಮಾರ್ಥಿಕ ಚಿಂತನೆಯು ನಾಶವಾಗುತ್ತಿದ್ದು, ಆಧ್ಯಾತ್ಮಿಕತೆಯಿಂದ ಲೌಕಿಕದತ್ತ ಸಾಗುತ್ತಿದೆ ಈ ಯಾಂತ್ರಿಕೃತದ ಯುಗದಲ್ಲಿ ಮಾನವನು ಲೌಕಿಕ ಭೋಗ ಜೀವನವನ್ನು ಆಶ್ರಯಿಸಿ, ಯುಗಧರ್ಮವನ್ನು ಮರೆಯುತ್ತಿದ್ದಾನೆ. ಅವನ ಮನೋಧರ್ಮ ಮತ್ತು ವರ್ತನೆಗಳೆಲ್ಲಾ ವಿಚಿತ್ರಗೊಳ್ಳುತ್ತಿದ್ದು, ಧರ್ಮ ಪಾಲನೆ, ದೇವರ ಮೇಲಿನ ನಂಬಿಕೆ, ನೀತಿ ನಿಯಮಗಳ ಪ್ರಜ್ಞೆ, ನೈತಿಕ ಮೌಲ್ಯಗಳ ನೆಲೆ ಸಡಿಲಗೊಳ್ಳುತ್ತಿದೆ. ವಿದ್ಯಾವಂತನಾದ ವಿಚಾರ ಪರನಾದ ಮಾನವ ಭೋಗಪ್ರಿಯತೆ ಮತ್ತು ವಸ್ತು ಪ್ರಿಯತೆಯನ್ನು ಮೈಗೂಡಿಸಿಕೊಂಡು, ಧರ್ಮ ಜೀವನ ಮೌಲ್ಯಗಳನ್ನು ನಿರ್ಲಕ್ಷ್ಯ ಮಾಡುತ್ತಿರುವುದರಿಂದ ಅವನ ಜೀವನವು ಗೊಂದಲಮಯವಾಗುತ್ತಿದ್ದು, ಈ ಸಂಕಷ್ಟದಿಂದ ಹೊರಬರಲು ಆಧ್ಯಾತ್ಮಿಕ ಚಿಂತನೆಯ ಬೆಳವಣಿಗೆಯು ಅತ್ಯಂತ ಮುಖ್ಯವಾದುದಾಗಿದೆ.

IIMRD JOURNALS

**ಪರಾಮರ್ಶನ ಗ್ರಂಥಗಳು**


- ಚನ್ನಬಸಪ್ಪ ಕೋ. (1964). ಸಮಗ್ರ ಕೃತಿಸಾರ ಸಂಗ್ರಹ. ಸಂಸ್ಥಾನ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.
- ಕೊಂಗವಾಡ ಎನ್.ಬಿ. (2009). ಶಿಕ್ಷಣ ಮತ್ತು ರಾಷ್ಟ್ರೀಯ ಕಳಕಳಿಗಳು. ವಿದ್ಯಾನಿಧಿ ಪ್ರಕಾಶನ ಗದಗ.
- ನಾರಾಯಣ ಎಂ. (2001). ಭಾರತೀಯ ಸಮಾಜ ಅಧ್ಯಯನ. ಲಕ್ಷ್ಮಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.
- ರುದ್ರೇಶ್ ಬಿ. ಎಸ್. (2011). ಶಿಕ್ಷಣದಲ್ಲಿ ತತ್ತ್ವಶಾಸ್ತ್ರ ಮತ್ತು ಸಮಾಜ ಶಾಸ್ತ್ರದ ಅಧ್ಯಯನ. ವಿದ್ಯಾನಿಧಿ ಪ್ರಕಾಶನ ಗದಗ.
- ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ. (2013). ಸಂ–3 , ಶ್ರೀರಾಮಕೃಷ್ಣಾಶ್ರಮ, ಮೈಸೂರು,
- ವೆಂಕಟೇಶ್ ಎಸ್. (1997). ವಿವೇಕಾನಂದ ದರ್ಶನ: ಒಂದು ಅಧ್ಯಯನ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.


IIMRD JOURNALS